# ಸ್ವತಂತ್ರ ಲೆಕ್ಕಪರಿಶೋಧಕರ ವರದಿ.

ಇವರಿಗೆ,

ಶ್ರೀ ದುರ್ಗಾದೇವಿ ಮಹಿಳಾ ಸಹಕಾರಿ ಬ್ಯಾಂಕ್ ನಿಯಮಿತ,

ಕಾರವಾರದ ಶೇರುದಾರರಿಗೆ–

## ಹಣಕಾಸಿನ ಲೆಕ್ಕಪತ್ರಗಳ ಬಗ್ಗೆ ವರದಿ :

ನಾವು ಇದರೊಂದಿಗೆ ಲಗತ್ತಿಸಿರುವ ಬ್ಯಾಂಕಿನ 31 ಮಾರ್ಚ್2022ರ ಹಣಕಾಸಿನ ಲೆಕ್ಕಪತ್ರಗಳ ಪರಿಶೋಧನೆಯನ್ನು ಮಾಡಿದ್ದು ಇದರಲ್ಲಿ 31 ಮಾರ್ಚ್2022ರ ಆಸ್ತಿ ಹೊಣೆ ಪಟ್ಟಿ, ಲಾಭ ನಷ್ಟ ತ:ಖ್ತೆ ಮತ್ತು ವರ್ಷಾಂತ್ಯದ ನಗದು ಪರಿಚಲನೆಯ ನಿರೂಪಣಾ ಪಟ್ಟಿಯು ಒಳಗೊಂಡಿರುತ್ತದೆ. ಅಲ್ಲದೇ ಪ್ರಮುಖ ಲೆಕ್ಕಪತ್ರಗಳನ್ನಿಡುವ ಧೋರಣೆಯ ಸಾರಾಂಶ ಮತ್ತು ವಿವರಣಾತ್ಮಕ ಸೂಚನೆಗಳು ಸೇರಲ್ಪಟ್ಟಿವೆ.

## ಹಣಕಾಸಿನ ಲೆಕ್ಕಪತ್ರಗಳ ಬಗ್ಗೆ ಆಡಳಿತದ ಹೊಣೆಗಾರಿಕೆ :

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಅನುಸಾರವಾಗಿ ಹಣಕಾಸಿನ ಲೆಕ್ಕಪತ್ರಗಳ ತಯಾರಿಸುವಿಕೆಯು ಬ್ಯಾಂಕಿನ ಹೊಣೆಗಾರಿಕೆಯಾಗಿರುತ್ತದೆ.ಈ ಹೊಣೆಗಾರಿಕೆಯಲ್ಲಿ ವಿನ್ಯಾಸ, ಹಣಕಾಸಿನ ಲೆಕ್ಕಪತ್ರಗಳ ತಯಾರಿಕೆಗೆ ಅನುಗುಣವಾಗಿ ಆಂತರಿಕ ನಿಯಂತ್ರಣ ಹೇರಿಕೆ ಕಾಯ್ದುಕೊಂಡು ಬರುವಿಕೆ ಹಾಗೂ ಅವುಗಳ ವಂಚನೆ ಹಾಗೂ ತಪ್ಪಿನಿಂದಾಗಲೀ ವಿಷಯಾತ್ಮಕ ತಪ್ಪು ವ್ಯಾಖ್ಯೆಗಳಿಂದ ಮುಕ್ತವಾಗಿರುವುದು ಮುಖ್ಯವಾಗಿರುತ್ತದೆ.

## ಲೆಕ್ಕಪತ್ರಗಳ ಹೊಣೆಗಾರಿಕೆ :

ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇಲೆ ಇಲ್ಲಿನ ಹಣಕಾಸಿನ ಲೆಕ್ಕಪತ್ರಗಳ ಕುರಿತು ನಮ್ಮ ಅಭಿಪ್ರಾಯ ವ್ಯಕ್ತಪಡಿಸುವುವಷ್ಟಕ್ಕೆ ನಮ್ಮ ಹೊಣೆಗಾರಿಕೆ ಸೀಮಿತವಾಗಿದೆ. ದಿ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಬಿಡುಗಡೆಗೊಳಿಸಿದ ಲೆಕ್ಕಪರಿಶೋಧನಾ ನೀತಿಗನುಗುಣವಾಗಿ ಲೆಕ್ಕಪರಿಶೋಧನೆಯನ್ನು ಮಾಡಿದ್ದೇವೆ. ಈ ಲೆಕ್ಕಾಚಾರದ ಪಟ್ಟಿಗಳು ಗಣ್ಯವಾದ ತಪ್ಪು ಹೇಳಿಕೆಗಳಿಂದ ಹೊರಪಟ್ಟಿವೆ ಎಂಬ ವಿವೇಚನಾ ಶಕ್ತಿಯ ಭರವಸೆ ಹೊಂದುವ ರೀತಿಯಲ್ಲಿ ನಾವು ಲೆಕ್ಕಪರಿಶೋಧನೆಯನ್ನು ಯೋಜಿಸಿ ನಿರ್ವಹಿಸಬೇಕೆಂದು ಆ ನೀತಿಗಳ ಆಪೇಕ್ಷೆ.

ಲೆಕ್ಕಪತ್ರಗಳಲ್ಲಿ ನೀಡಲ್ಪಟ್ಟ ಮೊತ್ತದ ಬಗ್ಗೆ ಲೆಕ್ಕಪರಿಶೋಧನೆಯ ಬಗೆಗೆ ಸೂಕ್ತ ಆಧಾರವನ್ನು ಕೇಳಿದ ಕಾರ್ಯನಿರ್ವಹಣೆಯನ್ನು ಪೂರೈಸುವುದನ್ನು ಒಳಗೊಂಡಿರುತ್ತದೆ. ಕಾರ್ಯನಿರ್ವಹಣೆಯ ಆಯ್ಕೆಯು ಲೆಕ್ಕಪರಿಶೋಧಕರ ವಿವೇಚನೆಗೆ ಸಂಬಂಧಿಸಿದ್ದಾಗಿದ್ದು, ಲೆಕ್ಕಪತ್ರಗಳಲ್ಲಿನ ನ್ಯೂನ್ಯತೆ, ತಪ್ಪು ಹೇಳಿಕೆ ಅಥವಾ ವಂಚನೆ ನಿರ್ಧಾರದಲ್ಲೂ ಇದು ಲೆಕ್ಕಪರಿಶೋಧಕರ ವಿವೇಚನೆಗೆ ಬಿಟ್ಟಿದ್ದಾಗಿರುತ್ತದೆ.ಅಂತಹ ನಿರ್ಧಾರಕ್ಕೆ ಬರುವಲ್ಲಿ ಲೆಕ್ಕಪರಿಶೋಧಕರು ಬ್ಯಾಂಕಿನ ಆಂತರಿಕ ನಿಯಂತ್ರಣವು ಹಣಕಾಸಿನ ಲೆಕ್ಕಪತ್ರ ತಯಾರಿಸುವಲ್ಲಿ, ಲೆಕ್ಕಪರಿಶೋಧನಾ ವಿನ್ಯಾಸದಲ್ಲೇ ರಚಿಸಲ್ಪಟ್ಟಿದೆಯೋ, ಅದು ಸಂದರ್ಭಕ್ಕೆ ಸೂಕ್ತವಾಗಿದೆಯೇ ಎಂದು ಖಚಿತ ಪಡಿಸಿಕೊಳ್ಳಬಹುದು.ಲೆಕ್ಕಪರಿಶೋಧನೆ ಲೆಕ್ಕವಿಡುವ ಮೂಲ ತತ್ವಕ್ಕನುಸಾರವಾಗಿ ಯಥಾರ್ಥವಾಗಿ ರಚಿಸಲ್ಪಟ್ಟಿದೆ ಎನ್ನುವುದನ್ನು ಲೆಕ್ಕವಿಡುವಲ್ಲಿ ಬ್ಯಾಂಕಿನ ಆಡಳಿತ ಮಂಡಳಿ ಮಾಡಿದ

I. P. VARUR & CO. HUBLI. CHARTERED ACCOUNTANTS

ಅಂದಾಜುಗಳು ಸಕಾರಣವಾಗಿವೆ ಎನ್ನುವುದನ್ನು ಹಾಗೆಯೇ ಲೆಕ್ಕಾಚಾರ ಪಟ್ಟಿಗಳ ಸಮಗ್ರ ನಿರೂಪಣೆಯ ಮೇಲೆ ಮೌಲ್ವೀಕರಣ ಮಾಡುವುದು ಲೆಕ್ಕಪರಿಶೋಧನೆಯ ವ್ಯಾಪ್ತಿಯ ಒಳಗೆ ಬರುತ್ತದೆ.

ಲೆಕ್ಕಪರಿಶೋಧನೆ ಸಂದರ್ಭದಲ್ಲಿ ನಾವು ಸಾಕಷ್ಟು ಲೆಕ್ಕಪರಿಶೋಧಗೆ ಅಗತ್ಯವಿರುವ ಪುರಾವೆಗಳನ್ನು ಪಡೆದಿದ್ದು ಮತ್ತು ಅದರ ಆಧಾರದ ಮೇಲೆ ಲೆಕ್ಕಪತ್ರ ಪರಿಶೋಧನಾ ಅಭಿಪ್ರಾಯವನ್ನು ನೀಡುವಲ್ಲಿ ನಾವು ಪರಿಪೂರ್ಣರಾಗಿದ್ದೇವೆ ಎಂದು ನಂಬಿದ್ದೇವೆ.

**ಅಭಿಪ್ರಾಯ :**

ನಮ್ಮ ಅಭಿಪ್ರಾಯ ಹಾಗೂ ನಮಗೆ ಲಭ್ಯವಿರುವ ಮಾಹಿತಿ ಮತ್ತು ನಮಗೆ ನೀಡಿರುವ ಹೇಳಿಕೆಗಳ ಅನುಸಾರ ಆರ್ಥಿಕ ವರದಿಗಳು ಈ ಕೆಳಗೆ ತಿಳಿಸಿರುವವುಗಳ ಅವಲೋಕನಕ್ಕೆ ಒಳಪಟ್ಟಂತೆ ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕಾರವಾಗಿರುವ ಲೆಕ್ಕಪತ್ರಗಳ ತತ್ವಗ'ಳ ಅನುಸಾರ ಚಿತ್ರಣ ಒದಗಿಸುತ್ತವೆ.

ಎ ಆಸ್ತಿ ಹೊಣೆ ಪಟ್ಟಿ ಸಂದರ್ಭದಲ್ಲಿ 31, ಮಾರ್ಚ್2022ರಂದು ಇದ್ದ ಬ್ಯಾಂಕಿನ ವ್ಯವಹಾರಿಕ ಸ್ಥಿತಿಯ ನೈಜ ಮತ್ತು ಯಥೋಚಿತದರ್ಶವನ್ನು,

ಬಿ ಲಾಭ ಮತ್ತು ನಷ್ಟ ತ:ಖ್ತೆ ಆ ದಿನದಂದು ಕೊನೆಗೊಂಡ ವರ್ಷದ ಬ್ಯಾಂಕಿನ ಲಾಭಕ್ಕೆ ಸಂಬಂಧಿಸಿದ ಮಟ್ಟಿಗೆ.

**ಕಾನೂನು ಮತ್ತು ನಿಯಂತ್ರಣ ಅಗತ್ಯತೆ ಬಗ್ಗೆ ವರದಿ :**

1. ಸಹಕಾರ ಸಂಘಗಳ ಲೆಕ್ಕಪರಿಶೋಧನೆ ಇಲಾಖೆಯವರು ನೀಡಿರುವ ಮಾದರಿಯಲ್ಲಿ ವರದಿಯನ್ನು ಸಹ ಈ ವರದಿಯೊಂದಿಗೆ ನೀಡಿರುತ್ತೇವೆ.

2. ನಮ್ಮ ಅತ್ಯುತ್ತಮ ತಿಳುವಳಿಕೆ ಹಾಗೂ ನಂಬಿಕೆಯ ಪ್ರಕಾರ ಲೆಕ್ಕಪರಿಶೋಧನೆಗೆ ಅಗತ್ಯವೆಂದು ಕಂಡು ಬಂದ ಎಲ್ಲಾ ಮಾಹಿತಿ ಮತ್ತು ವಿವರಣೆಗಳನ್ನು ನಾವು ಪಡೆದಿದ್ದೇವೆ.

3. ನಮ್ಮ ಅಭಿಪ್ರಾಯದಂತೆ, ಕಾನೂನು ಪ್ರಕಾರ ಬೇಕಾದಂತಹ ಲೆಕ್ಕಪತ್ರ ಪುಸ್ತಕಗಳನ್ನು ಬ್ಯಾಂಕು ಈ ತನಕ ಇರಿಸಿದೆ ಎನ್ನುವುದುಅಂತಹ ಪುಸ್ತಕಗಳ ಶೋಧನೆಯಿಂದ ನಮಗೆ ತಿಳಿದು ಬಂದಿದೆ.

4 ಈ ವರದಿಯಲ್ಲಿ ಕಾಣಿಸಿರುವ ಬ್ಯಾಂಕಿನ ಆಸ್ತಿ ಹೊಣೆ ಪಟ್ಟಿ ಮತ್ತು ಲಾಭ ನಷ್ಟ ತ:ಖ್ತೆಗಳು ಬ್ಯಾಂಕಿನ ಲೆಕ್ಕಪುಸ್ತಕಗಳಿಗೆ ಹೊಂದಿಕೆಯಾಗಿರುತ್ತವೆ.

ಸ್ಥಳ : ಕಾರವಾರ
ದಿನಾಂಕ : 22-06-2022

**I. P. VARUR & CO**
**FRN: 004536 S**
**M. No: 023757**

UDIN : **22023757ALNFTH3730**

For I. P. VARUR & CO
Chartered Accountants

I. P. VARUR & CO. HUBLI. CHARTERED ACCOUNTANTS

**H. N. ADINAVAR**
**Partner**